“ಅಯ್ಯೋ... ಗಂಟೆ ಎಂಟಾಯಿತಾ? ಮನೆಯಲ್ಲಿ ಎಲ್ಲರೂ ಕಾಯುತ್ತಿರಬಹುದು'' ಬೇಗ ಬೇಗನೇ ಅಂಗಡಿಯ ಷಟರ್ ಎಳೆದು ಸಣ್ಣ ಕೈಚೀಲವನ್ನು ಹಿಡಿದು ಮನೆಯತ್ತ ಹೆಜ್ಜೆ ಹಾಕತೊಡಗಿದೆ. ಅಂಗಡಿಯಿಂದ ಮನೆಗೆ ಒಂದು ಅರ್ಧ ಮೈಲು ನಡೆಯಬೇಕಿತ್ತು. ನಿರ್ಜನ ರಸ್ತೆ. ಆದರೆ, ನಾನು ಯಾವತ್ತೂ ಓಡಾಡುವ ಹಾದಿ. ಯಾವುದರ ಭಯವೂ ಇರಲಿಲ್ಲ. ಅಪ್ಪ ಯೌವನದಲ್ಲಿ ಪ್ರಾರಂಭಿಸಿದ ದಿನಸಿ ಅಂಗಡಿ. ದೊಡ್ಡ ಸಾಹುಕಾರನ ತಮ್ಮನಾದರೂ ತನ್ನ ಕೆಟ್ಟ ಚಾಳಿಗೆ ಎಲ್ಲಾ ಕಳೆದುಕೊಂಡರಂತೆ. ಅಂಗಡಿ ಅವರಿಗೆ ದಿನಸಿ ಜಿನ್ನಪಣ್ಣ ಎಂಬ ಹೆಸರು ಶಾಶ್ವತವಾಗಿ ಉಳಿಸಿತ್ತು. ಹಾಗೇ ಅವರ ಬಗ್ಗೆ ಕೆಲವು ಕಥೆಗಳನ್ನು ಕೇಳಿದ್ದೆ. ಆದರೆ, ಅದೆಲ್ಲಾ ಕಟ್ಟುಕಥೆ ಎಂಬ ಹಾಗೆ ನಾನು ನನ್ನನ್ನು ಸಮಾಧಾನಿಸಿಕೊಂಡಿದ್ದೆ. ಅಮ್ಮ ಮಾತ್ರ ಅಪ್ಪನನ್ನು ನೆನಪಿಸಿಕೊಂಡು ಅತ್ತದ್ದೇ ಕಡಿಮೆ! ಯಾವಾಗಲಾದರೂ ಏನಾದರೂ ಕೆಟ್ಟದು ಸಂಭವಿಸಿದರೆ “ರುಕ್ಮನ ಶಾಪ” ಎಂದು ಗೊಣಗುತ್ತಿದ್ದಳು. ಅದೂ ನನ್ನ ಎರಡು ವರ್ಷದ ಎಳೆಯ ಕಂದ ಬಿಸಿನೀರ ಹಂಡೆಗೆ ಬಿದ್ದು ಅಸುನೀಗಿದ ದಿನ ಇದೇ ಮಾತನ್ನು ಆಕೆ ಹಲವು ಸಲ ಹೇಳಿದ್ದಳು. ಅದನ್ನು ನಾನು ಮರೆಯುವಂತಿರಲಿಲ್ಲ. ಮಗುವನ್ನು ಕಳೆದುಕೊಂಡದ್ದರಲ್ಲಿ ನಮ್ಮ ಅಜಾಗರೂಕತೆಯೇ ಎದ್ದು ಕಾಣುತ್ತಿದ್ದರಿಂದ ನಾನು ಬೇರೆ ಏನನ್ನೂ ಯೋಚಿಸಲಿಲ್ಲ. ಅಷ್ಟಕ್ಕೂ ಈ ಶಾಪ ಪಾಪದಲ್ಲಿ ನನಗೆ ನಂಬಿಕೆಯಿರಲಿಲ್ಲ. ಅಲ್ಲದೇ ರುಕ್ಮ ಯಾರು ಎಂದು ನನಗೆ ಗೊತ್ತಿರಲಿಲ್ಲವಾದ ಕಾರಣ ಅವನ ಶಾಪದ ಮಾಹಿತಿ, ವಿವರ ನಿಗೂಢವಾಗಿತ್ತು. ತಂದೆಯ ಮರಣದ ಅನಂತರ ನಾನು ಅವರ ಏಕೈಕ ಪುತ್ರನಾದುದರಿಂದ ಯಾವ ವಿವಾದ, ಹಂಚುವಿಕೆಯೂ ಇಲ್ಲದೆ ನನ್ನ ಪಾಲಿಗೆ ಅಂಗಡಿ ಬಂದಿತ್ತು. ನನ್ನ ಮದುವೆಯಾದ ನಾಲ್ಕೈದು ವರ್ಷದಲ್ಲಿ ತಾಯಿಯೂ ದೇವರ ಪಾದ ಸೇರಿಕೊಂಡಿದ್ದರು. ಮಡದಿ ಸುಮಿತ್ರೆ ಹೊಂದಿಕೊಂಡು ಹೋಗುವ ಹೆಣ್ಣು. ಮಗಳು ಬೆಳೆದು ದೊಡ್ಡವಳಾಗಿದ್ದಳು. ಇದ್ದುದರಲ್ಲಿ ಸಂತೃಪ್ತ ಕುಟುಂಬ ಎನ್ನುವುದರಲ್ಲಿ ಯಾವ ಸಂಶಯವೂ ಇರಲಿಲ್ಲ.



ಕತ್ತಲಿನ ನಡುವೆ ನಾನು ಟಾರ್ಚಿನ ಬೆಳಕ ಬಿಂದಿಯಿಡುತ್ತಾ ಮುಂದೆ ಮುಂದೆ ಹೆಜ್ಜೆಯಿಡುತ್ತಿದ್ದೆ. ದೂರದಲ್ಲಿ ಸಣ್ಣ ಹೆಜ್ಜೆ, ಧ್ವನಿ. ಸಹಜವಾಗಿ ಟಾರ್ಚಿನ ಬೆಳಕು ಅತ್ತ ಹಾಯಿಸಿದೆ. ಯಾರೂ ಕಾಣಲಿಲ್ಲ. ಭ್ರಮೆಯಿರಬೇಕು ಅಂದುಕೊಂಡು ಮತ್ತೆ ನಡೆಯತೊಡಗಿದೆ. ಕೀಟಗಳ ವಾದ್ಯಗೋಷ್ಠಿ ನಡೆಯುತ್ತಿತ್ತು. ಆಗಸದಲ್ಲಿ ಚಂದಿರ ಮೋಡಗಳಡಿಯಲ್ಲಿ ಆಗಾಗ ನುಸುಳಿ ಬೆಳದಿಂಗಳ ಸೋಸುತ್ತಿದ್ದ.